ಶ್ರೀ ರಾಘವೇಂದ್ರ ಪಾಟೀಲರು

-ಡಾ.ಚಿಂತಾಮಣಿ ಕೊಡ್ಲೆಕೆರೆ

ರಾಘವೇಂದ್ರ ಪಾಟೀಲರ ಪರಿಚಯ ನನಗಾಗಿದ್ದು ಅವರ 'ಒಡಪುಗಳು' ಕಥೆಯ ಮೂಲಕ. ಅದಕ್ಕೆ, ಆ ವರ್ಷ ಆಗಷ್ಟೇ ಕಾಲೇಜ್ ಸೇರಿದ್ದ ನಾನು ಉದಯವಾಣಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನಗಳಿಸಿದ ಪಾಟೀಲರ ಈ ಕಥೆಯನ್ನು ಓದಿ ಹರ್ಷ, ದಿಗಿಲು ಅನುಭವಿಸಿದ್ದು ಇನ್ನೂ ಹಸಿ ಹಸಿ ನೆನಪು. ಮುಂದೆ ನನ್ನ ಕವನ ಸಂಕಲನ ಪ್ರಕಟವಾದಾಗ ಅದನ್ನು ಮೆಚ್ಚಿ ಅವರು ಒಂದು ವಿಮರ್ಶಾ ಲೇಖನ ಬರೆದರು. ಅದೂ ಆದ ಮೇಲೆ ಇನ್ಯಾವಾಗಲೋ ನಮ್ಮ ಮೊದಲ ಭೆಟ್ಟಿ ಜರುಗಿತು! ಅದು ಯಾವಾಗ ಎಂಬುದು ನೆನಪಿಲ್ಲ, ಅಷ್ಟು ಹೊತ್ತಿಗೆ ಅದರ ಅಗತ್ಯವಿರದಷ್ಟು ಅದೊಂದು ಸಾಂಕೇತಿಕ ಕ್ರಿಯೆಯಾಗಿತ್ತು. ಅಂದಿನಿಂದ ಇಂದಿಗೂ ಅದೇ ಹಿರೇತನದಿಂದ ನನ್ನನ್ನು ತಮ್ಮನೆಂಬಂತೆ, ತಮ್ಮಲ್ಲೊಬ್ಬನೆಂಬಂತೆ ಕಂಡಿದ್ದಾರೆ. ಅಪ್ಪಟ ಹೃದಯವಂತಿಕೆಯ ಈ ಮನುಷ್ಯನ ಸರಳ ನಗುವಿನಲ್ಲಿ ಎಲ್ಲವನ್ನೂ ಎಲ್ಲರನ್ನೂ ತೆಕ್ಕೆಗೆ ತೆಗೆದುಕೊಳ್ಳುವ ಗುಣವಿದೆ. ಮುಖ್ಯವಾಗಿ ಅವರು ಆನಂದಕಂದ ಗ್ರಂಥಮಾಲೆಯ ಮುಖಾಂತರ ನನ್ನಂಥ ಅನೇಕ ಗೆಳೆಯರ ಪುಸ್ತಕಗಳನ್ನು ಪ್ರಕಟಿಸಿ ಉಪಕರಿಸುತ್ತಿರುವುದನ್ನು ನೆನೆಯಬೇಕು. ಸ್ವತಃ ಒಳ್ಳೆಯ ಕತೆಗಾರರಾಗಿ ಹೆಸರುಗಳಿಸಿರುವ ಅವರಿಗೆ ಇಂಥವೆಲ್ಲ ಪ್ರಕಾಶನದ ಸಾಹಸಮಾಡಿ ಕಷ್ಟಪಡಬೇಕೆಂದು ಯಾಕನಿಸುತ್ತದೋ ದೇವರಿಗೇ ಗೊತ್ತು! ಆದರೂ ಬೇಸರವಿಲ್ಲದೆ ಅವರು ಈ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ.

ಇತ್ತೀಚೆಗೆ ನಾನು ಅವರು ಬರೆದ ಎಲ್ಲ ಬರಹಗಳನ್ನೂ (ಕಥೆ, ಕಾದಂಬರಿ, ವಿಮರ್ಶೆ, ಸಂಕಲಿತ-ಅಸಂಕಲಿತ ಬರಹಗಳು) ಓದಿದ್ದೇನೆ. ಈ ಬರಹಗಳನ್ನು ಅವರಿಂದ ಪಡೆಯಲು ಪಡಬಾರದ ಕಷ್ಟಪಟ್ಟಿದ್ದೇನೆ! ಏಕೆಂದರೆ ಪಾಟೀಲರಿಗೆ ಕಾಲದ ಅನಂತತೆಯ ಬಗೆಗೆ ಅಪಾರ ವಿಶ್ವಾಸ. ನಾನು ಯಾವಾಗ ಏನೂ ಕೇಳಿದರೂ ಅವರು ಇಲ್ಲವೆಂದುದಿಲ್ಲ. ಆದರೆ ಅದನ್ನು ಕಳುಹಿಸಲು ಮಾತ್ರ ಮರೆಯುತ್ತಾರೆ! ಮರೆವು ಎಂಬುದೂ ಸರಿಯಾದ ಶಬ್ದವಲ್ಲ, "ಇನ್ನೇನು ಕಳಿಸೇಬಿಡುತ್ತೇನೆ" ಎಂದು ದೂರವಾಣಿಯಲ್ಲೇ ಆಶ್ವಾಸನೆ ಕೊಡುತ್ತಾರೆ - ಹತ್ತಾರು ಕರೆಗಳ ಬಳಿಕವೂ! ಆದರೆ ಪದೇ ಪದೇ ಫೋನು, ಪತ್ರಗಳು ಪ್ರಯೋಜನವಾಗದಿದ್ದಾಗ ಮಲ್ಲಾಡಿಹಳ್ಳಿಯ ಅವರ ಮನೆಗೆ ದಾಳಿಮಾಡಿ ನನಗೆ ಬೇಕಾ ಬರಹಗಳನ್ನು ಪಡೆದು,ಅವರನ್ನು ಓದಿದ್ದರಿಂದ ನನಗಿದ್ದ ಒಂದು ಸಂದೇಹ ಪರಿಹಾರವಾಯಿತು. "ಈ ಮನುಷ್ಯ ನನಗಿಂತ ಹೆಚ್ಚು ಆಲಸಿ" ಎಂಬ ತೀರ್ಮಾನಕ್ಕೆ ಬಂದಿದ್ದ ನಾನು ನನ್ನ ನಿರ್ಧಾರ ಬದಲಾಯಿಸಿಕೊಂಡೆ. ಅವರ ಬರಹಗಳ ಹಿಂದಿದ್ದ ಶ್ರಮ, ಸಂಯಮ, ವಿನಯ, ಪ್ರಾಮಾಣಿಕತೆ, ಧೈರ್ಯ ಇವನ್ನೆಲ್ಲ ಕಂಡು ಆದರ ಬೆಳೆಸಿಕೊಂಡೆ. ಪಾಟೀಲರು ಪ್ರಾಮಾಣಿಕವಲ್ಲದ ಯಾವ ಕಾರ್ಯವನ್ನೂ ಮಾಡುವವರಲ್ಲ. ಅವರು ನಿಧಾನ ಇರಬಹುದು, ಆದರೆ ದೃಢ ಮನುಷ್ಯ.

******

ದಾಸ್ತೋವ್ ಸ್ಕಿ, ಬಾಷೆವಿಕ್ ಸಿಂಗರ್, ಮಾರ್ಕ್ವೆಜ್ ಮುಂತಾದ ಮಹಾನ್ ಪ್ರತಿಭೆಯ ಲೇಖಕರನ್ನು ಪಾಟೀಲರು ಪುಟ್ಟ ಹಳ್ಳಿಯಲ್ಲೇ ಕುಳಿತು ಓದಿದರು. ಅವರ ಸಾಹಿತ್ಯ ಸೃಷ್ಟಿಗೆ ಪ್ರೇರಣೆ ನೀಡಿದ ಕೆಲ ಮುಖ್ಯ ವಿಶ್ವಪ್ರಸಿದ್ಧಿಯ ಲೇಖಕರಿವರು. ದಾಸ್ತೋವ್ ಸ್ಕಿಯ ವಾಸ್ತವಗ್ರಹಿಕೆಯ ವಿಧಾನ, ಭಾಷೆವಿಕ್ ಸಿಂಗರ್‌ನ ಮಾಂತ್ರಿಕ ಲೋಕ, ಮಾರ್ಕ್ವೆಜ್‌ನ ಏಕಾಂತ ಮತ್ತು ಲೋಕಮುಖತೆಯ ದ್ವಂದ್ವ ವಿನ್ಯಾಸ ಇವೆಲ್ಲ ಅವರನ್ನು ಅನನ್ಯವಾಗಿ ಪ್ರಭಾವಿಸಿದವು. ಕನ್ನಡದಲ್ಲೂ ಮಾಸ್ತಿ, ಚಿತ್ತಾಲ, ಅನಂತಮೂರ್ತಿ ಮತ್ತು ತೇಜಸ್ವಿ ಇವರನ್ನು ರಾಘವೇಂದ್ರ ಪಾಟೀಲರು 'ಕಥನ ಕೌತುಕ ಹುಟ್ಟಿಸಿ ಕಥೆ ಬರೆಯಲು ತನ್ನ ಮೋಟು ಬೆರಳುಗಳನ್ನು ಚಿಗುರಿಸಿದ

ದ್ರೋಣಾಚಾರ್ಯರು'ಗಳೆಂದು ಕರೆದಿದ್ದಾರೆ. ಈ ಚತುರರಿಗೆ ಅವರ ಇದುವರೆಗಿನ ಕಥೆಗಳ ಸಂಕಲನ "ತುದಿಯೆಂಬೋ ತುದಿಯಿಲ್ಲ"ವನ್ನು ಕೃತಜ್ಞತಾಪೂರ್ವಕವಾಗಿ ಅರ್ಪಿಸಿದ್ದಾರೆ.

******

ರಾಘವೇಂದ್ರ ಪಾಟೀಲರು ನಮ್ಮ ಬಹುಮುಖ್ಯ ಕಥೆಗಾರರಲ್ಲಿ ಒಬ್ಬರು. ಶಿಕ್ಷಕರಾಗಿಯೂ ಮಲ್ಲಾಡಿಹಳ್ಳಿಯಲ್ಲಿ ಅವರದು ಅನುಪಮಸೇವೆ. ಸಂಸ್ಥೆಯ ಆಡಳಿತಾಧಿಕಾರಿಯಾಗಿ ಅವರು ದಕ್ಷ ಸೇವೆ ಸಲ್ಲಿಸುತ್ತಿರುವುದನ್ನು, ನಾಟಕ ತಂಡ ಕಟ್ಟಿ ಬೆಳೆಸುತ್ತಿರುವುದನ್ನು ಕಂಡು ಇವರ ಬಹುಮುಖೀ ಚಟುವಟಿಕೆಗಳ ಕುರಿತು ಹೆಮ್ಮೆ ಎನಿಸಿದೆ. ಒಳ್ಳೆಯ ಲೇಖಕರೆಲ್ಲ ಒಳ್ಳೆಯ ಮನುಷ್ಯರಾಗಿರುತ್ತಾರೆಂದೇನಿಲ್ಲ. ಆದರೆ ಪಾಟೀಲರು ಇಲ್ಲೂ ಅಪವಾದವೇ! ಅವರೊಬ್ಬ ಸಹೃದಯೀ ಮನುಷ್ಯರಾಗಿರುವುದರಿಂದಲೇ ಬಯಲು ಸೀಮೆಯ ಅಂತರಂಗದ ಕಥೆಗಳನ್ನು ಬರೆದ ಅತ್ಯುತ್ತಮ ಕಥೆಗಾರರಾಗಿದ್ದಾರೆ! ಇಷ್ಟೆಲ್ಲ ಆದರೂ ಈ ಮನುಷ್ಯನ ಬಗ್ಗೆ ನನಗೊಂದೇ ಬೇಸರ. ಇಷ್ಟು ನಿಧಾನಸ್ಥನಾದ ಈ ಮನುಷ್ಯನಿಗೆ ಇಷ್ಟು ಬೇಗ ಅರವತ್ತು ಹೇಗಾಯಿತು?